(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ರೈತರಿಗೆ ಏನು ಪರಿಹಾರ ಕೊಟ್ಟಹಾಗೆ ಆಯಿತು ? ಇನ್ನಮುಂದಕ್ಕಾದರೂ ಪರಿಹಾರ ಕಲ್ಪಿಸಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಈ ಸಾಲವನ್ನು ಕೊಟ್ಟಿರುವುದು ಬಹಳ ಕಡಮೆ ಬಡ್ಡಿ ದರದಲ್ಲಿ. ಶೇಕಡ ಮೂರು ರೂಪಾಯಿನಂತೆ ಕೊಟ್ಟಿದ್ದೇವೆ. ಸಾಲ ವಾಪಸು ಸರಿಯಾಗಿ ಕೊಡದೆ ಇದ್ದರೆ penal interest ಹಾಕುತ್ತೇವೆ. ಇಲ್ಲದೆ ಇದ್ದರೆ ಸಾಲದ ಹಣ ವಸೂಲಾಗುವುದಿಲ್ಲ. penal interest ಇರುವುದರಿಂದ ಏನಾದರೂ ಮಾಡಿ ಸಾಲ ತೀರಿಸುವ ಪ್ರಯತ್ನ ಮಾಡುತ್ತಾರೆ. ವಿಶಿಷ್ಟ ಸನ್ನಿವೇಶಗಳೇನಾದರೂ ಇದ್ದು ನನಗೆ ಬರೆದರೆ, ಅಂಥ ಪರಿಸ್ಥಿತಿಯಲ್ಲಿ ಡೆಪ್ಯುಟಿ ಕಮಿಷನರಿಗೆ ಬರೆದು ಮಳೆಬೆಳೆಗಳಿಲ್ಲದೆ ಇವ್ಯಾಗ ರಿಯಾಯಿತಿ ತೋರಿಸಲು ಕಳಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗುಂಡ್ಲುಪೇಟೆ ತಾಲ್ಲೂಕಿನ ರೈತರಿಗೆ ಸರ್ಕಾರ ಇದುವರೆಗೂ ಮಾಡಿರತಕ್ಕ ಉದಾರವಾದ ಸಹಾಯದ ಜೊತೆಗೆ ದೊಡ್ಡ ಮನಸ್ಸುಮಾಡಿ ಈಗ ಕೇಳಿರುವ ಸಹಾಯವನ್ನೂ ಒದಗಿಸಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ —ಖಂಡಿತವಾಗಿ ಮಾಡುತ್ತೇವೆ.

ಶ್ರೀ ಅಂಗಡಿ ಚನ್ನಬಸಪ್ಪ.—ಇಂಥ ಉದ್ದೇಶಗಳಿಗೆ ಕೊಟ್ಟ ಸಾಲಗಳಮೇಲೆ penal interest ಹಾಕಿದರೆ, ತಮಗೂ ಮತ್ತು ಬಹಳ ಬಡ್ಡಿ ವಸೂಲ್ಮಾಡತಕ್ಕ ಮಾರವಾಡಿಗಳಿಗೂ ಏನಾದರೂ ಭೇದ ಏದೆಯೇ ಸ್ವಾಮಿ ?

Sri M. V. KRISHNAPPA.—3 per cent interest, is the lowest percentage of interest perhaps.

Sri ANGADI CHANNABASAPPA.—It ranges from 3 to 5 per cent.

Sri M. V. KRISHNAPPA.—It is three per cent under the liberalised scheme If the farmer gets 3,000 rupees, for digging a well, it is to be replaid in ten instalments at the rate of 3 per cent. ನಾವು ಕೊಡುವುದು ಶೇಕಡ 5, ರೈತರಿಂದ ತೆಗೆದುಕೊಳ್ಳುವುದು ಶೇಕಡ 3, ಶೇಕಡ 2 ನಷ್ಟವಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಚಕ್ಕೆ ಕಂಟ್ರಾಕ್ಟ್ಮಾಡಿ default ಆಗಿರುವವರಿಗೆ penal interest ಹಾಕದೆ ಬಡ ರೈತರಮೇಲೆ ಮಾತ್ರ ಹಾಕುತ್ತೀರಿ. ಇದರಿಂದ ರೈತರಿಗೆ ತೊಂದರೆಯಾಗಿರುವುದರಿಂದ ಇದನ್ನು ತೆಗೆದುಹಾಕುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—Penal interest ಶೇಕಡ 9 ಕೊಡುತ್ತಾರೆ. ಅದು ಜಾಸ್ತಿಯಾಗುವುದಿಲ್ಲ. ಮೂರುಕೋಟಿ ರೂಪಾಯಿಗಳನ್ನು ಸರ್ಕಾರದವರು ಈ ವರ್ಷ ಕೊಡುತ್ತಿದ್ದಾರೆ, ಬಾವಿಗಳನ್ನು ತೆಗೆಯುವುದಕ್ಕಾಗಿ. Penal interest ಇಲ್ಲದಿದ್ದರೆ, ವಸೂಲಾಗುವುದಕ್ಕೆ ತೊಂದರೆಯಾಗುತ್ತದೆ.

ಶ್ರೀ ಜಿ. ವಿ. ಗೌಡ.—1961-62ರಲ್ಲಿ ಪ್ರವಾಹದ ಹಾವಳಿಯಿಂದ ಅಭಾವ ಪರಿಸ್ಥಿತಿಯುಂಟಾಯಿತು. ಅಲ್ಲದೆ 35 per cent surcharge, cent per cent surchrage ರೈತರು ಕೊಡಬೇಕಾಗಿರುವುದರಿಂದ 1962-63ಕ್ಕೆ ರಿಯಾಯಿತಿಯನ್ನು ಮುಂದುವರಿಸುವುದಕ್ಕೆ ತಾವು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ರೈತರಿಗೆ ತೊಂದರೆ ಇದೆಯೋ ಅಲ್ಲಲ್ಲಿ ಪರಿಶೀಲನೆ ಮಾಡುತ್ತೇವೆ.

SHORT NOTICE QUESTION AND ANSWER

Ban of Public Meetings in Bangalore and Mysore during March and April, 1963.

Q.—25. **Sri B. P. KADAM** (Karwar) [on behalf of SRI S. RAJAGOPAL (KolarGold Fields)].—

Will the Government be pleased to state :—

(*a*) whether it is a fact that a public meeting was banned on the 31st March 1963 arranged in the Subhas Nagar Grounds, Bangalore, under Section 45 of the Mysore Police Act ;

(*b*) whether it is a fact that under the same section of the Mysore Police Act the public meeting fixed on the 3rd April 1963 at Mysore was also banned ;

(*c*) whether such a ban is in force in any part of the State and if so, how long it will continue ;

(*d*) what is the reason for promulgating the orders and banning the meetings ?

A.—Sri R. M. PATIL (Minister for Home).—

(*a*) Yes.
(*b*) Yes.
(*c*) No. The second part of the question does not arise.
(*d*) To prevent breach of public peace.

2-00 P.M.

Sri B. P. KADAM.—Is it a fact that permission to hold a meeting at Subhas Nagar was sought for and it was already granted ? I am referring to the meeting which was to be addressed by Sri A. K. Gopalan.

Sri R. M. PATIL.—Yes, it was granted.

Sri B. P. KADAM.—What was the reason to cancel the meeting by promulgating that order ?

Sri R. M. PATIL.—The reasons are assigned in the order itself.

Sri G. V. GOWDA.—Is it not a fact that Sri A. K. Gopalan had written a letter to the Chief Minister after the ban was imposed, expressing concern over this ban ?

Sri R. M. PATIL.—There was a letter addressed and that letter also has been taken into consideration by Government.

Sri C. J. MUCKANNAPPA.—What is the report that Government has received that there would be a breach of peace.

Sri R. M. PATIL.—Certain other rival institutions wanted to stage a demonstration by way of protest and thereby there was likelihood of breach of peace.

Sri G. V. GOWDA.—Did not Government come to know of the rival protest before granting permission to hold the meeting ?

Sri R. M. PATIL.—It was not known.

ಶ್ರೀ ಬಿ. ಎಲ್. ಗೌಡ.—ಒಂದು ವೇಳೆ ಗಲಾಟೆ ಆಗುವಂತಿದ್ದರೆ ಸರಕಾರಕ್ಕೆ ಅವನ್ನು ತಡೆಯಲು ಶಕ್ತಿ ಇರಲಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಶಕ್ತಿ ಇದೆ. ಆದರೆ ಅದನ್ನು ಉಪಯೋಗಿಸುವುದು ಸರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಪರ್ಮಿಷನ್ನನ್ನು ಕೊಡುವಾಗ ಈ ರೀತಿ ಇನ್ನೊಂದು ಸಂಘದ ವಿಚಾರ ಸರಕಾರದ ಮುಂದಿರಲಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಪರ್ಮಿಷನನ್ನು ಕೊಡುವಾಗ ಇರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಂತಹ ಬೇರೆ ಇದ್ದ ಸಂಘಗಳಾವುವು ?

Sri R. M. PATIL.—The workers' committee for National Defence consisted of the V.J.S., I.N.T.U.C., and H.I.N.D.,

Sri B. P. KADAM.—When the permission was already granted, could it not be better to prevent breach of peace being committed by the rival parties and would it not be possible for the police to prevent it ?

Mr. SPEAKER.—That question was answered.

Sri G. V. GOWDA.—What was the reason to ban the meeting likewise in Mysore City ?

Sri R. M. PATIL.—The same reasons are mentioned in the order itself.

Sri G. V. GOWDA.—Was it also due to the attitude of the rival party ?

Sri R. M. PATIL.—Certainly.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೈವಲ್ ಪಾರ್ಟಿಗಳು ಈ ರೀತಿ ಸಭೆಮಾಡಿ ಗಲಾಟೆ ಮಾಡುವುದು ತಪ್ಪು ಎಂದು ತಿಳಿದಿರುವಾಗ ಅವರ ಮೇರೆ ಕಾಯಿಕ್ರಮ ಏಕೆ ತೆಗೆದು ಕೊಳ್ಳಬಾರದಾಗಿತ್ತು ?

ಶ್ರೀ ಆರ್. ಎಂ. ಪಾಟೀಲ್.—ಕಾರ್ಯಕ್ರಮ ತೆಗೆದುಕೊಂಡರೂ ಸಾಧ್ಯವಾಗುವುದಿಲ್ಲ. Breach of peace ಗಾಗಿ ಈ ರೀತಿ ban ಹಾಕಲಾಯಿತು.

ಶ್ರೀ ಎ. ಕೃಷ್ಣಶೆಟ್ಟಿ.—ಇಂಟಕ್ ಮತ್ತು ಆರ್. ಎಸ್. ಎಸ್. ಸಂಸ್ಥೆಗಳಿಗೆ ಈ ಸರಕಾರದಿಂದ ಮನ್ನಣೆ ಪಡೆದು ಪ್ರಯೋಜನ ಹೊಂದುತ್ತಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಅವರಿಗೆ ನಾವು ನೂಚಿಸಿದರೂ ಏನು ಅನುಕೂಲವಾಗುವುದಿ ಎಂದು ತಿಳಿದು breach of peace ಗಾಗಿ ಈ ರೀತಿ ban ಹಾಕಲಾಯಿತು.

ಶ್ರೀ ಎ. ಕೃಷ್ಣಶೆಟ್ಟಿ.—ಇಂಟಕ್ ಸಂಸ್ಥೆಗೆ ಸರಕಾರದ ನೆರವು ಸಿಗುತ್ತಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಸರಕಾರದ ಸಹಾಯ ನೆರವಿರಬಹುದು, ಅದು ಎಷ್ಟುಮಟ್ಟಿ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ :

Mr. SPEAKER.—Question hour is over.

Members' Representations

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮೀ, ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಎರಡು ತಿಂಗಳ ಹಿಂದೆಯೇ ಪ್ರಶ್ನೆಗಳನ್ನು ಕೊಟ್ಟಿದ್ದರೂ ಇನ್ನೂ ಸರಕಾರದಿಂದ ಉತ್ತರ ಬರಲೇ ಇಲ್ಲ. ಇದರ ಬಗ್ಗೆ ತೀವ್ರ ಗಮನ ಕೊಡಬೇಕು.

ಎರಡನೇದು, ಈಗ ತುರ್ತು ಪರಿಸ್ಥಿತಿಯಿಂದ ಇನ್ನು ಮುಂದೆ ಪ್ರಶ್ನೋತ್ತರಗಳನ್ನು ಬರೀ ಕನ್ನಡದಲ್ಲೇ ಅಚ್ಚುಮಾಡಿ ಹಂಚಿದರೆ ಎಷ್ಟೋ ಹಣ ಇದರಿಂದ ಉಳಿತಾಯವಾಗುತ್ತದೆ.

Mr. SPEAKER.—It is a good suggestion.

ಶ್ರೀ ಆರ್. ಕೆ. ದಯಾನಂದ (ಕಾರ್ಕಳ).—ನಾನು ಕಾರ್ಕಳದ ಬಗ್ಗೆ ಒಂದು Call attention notice ಕೊಟ್ಟಿದ್ದೆ. ಇದು ಬಹಳ ಸೀರಿಯಸ್ ಆದದ್ದು.

Mr. SPEAKER.—There is certain procedure to be followed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಪ್ರಶ್ನೆಗಳಿಗೆ ಉತ್ತರ ಬಹಳ ದಿನಗಳಿಂದಲೂ ಕೊಡಲಾಗದಿದ್ದರೆ, ಸರಕಾರ ತಮ್ಮ ಪರ್ಮಿಷನ್ನನ್ನು ತೆಗೆದುಕೊಂಡು ಏನು ತೊಂದರೆಗಳಿವೆ ಎನ್ನುವುದನ್ನ ಹೇಳುತ್ತಿದ್ದರು. ಹಾಗಿದ್ದರೂ ಇನ್ನು ಸರಕಾರದ ವತಿಯಲ್ಲಿರುವ ನಮ್ಮ ಎಷ್ಟೋ ಹಳೆ ಪ್ರಶ್ನೆಗಳಿಗೂ ಉತ್ತರ ಬರಲಿಲ್ಲ.

Mr. SPEAKER.—The Hon'ble Member may please send a list of questions to me.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮೀ, ತಾವು ರವಷ್ಟು ಈ ವಿಚಾರದಲ್ಲಿ ಬಿಗಿಯಾಗಿರಬೇಕು ಎಂದು ಸೂಚನೆ ಮಾಡುತ್ತೇನೆ. ಸರಕಾರ ಏನು ತೊಂದರೆ ಇದೆ ಎಂದು ಹೇಳಿದ್ದಾರೆ, ಅದರಿಂದಲಾದರೂ ಸಮಾಧಾನವಾಗುತ್ತಿತ್ತು. ಆ ರೀತಿ ಸರಿಯಾದ ಅವಕಾಶ ಕಲ್ಪಿಸಿ ಕೊಡಬೇಕು.

Sri S. SIVAPPA (Sravanabelagola).—Just now I have received a telegram. These telegrams relate to police atrocities being committed in various places. I am seeing every day letters like this.

Mr. SPEAKER.—The moment the Hon'ble Member receives a telegram, the world does not become seized of it.